# ರಾಮಸತ್ವದ ಶೋಧವಾಗಿ ಡಿ.ವಿ.ಜಿ.ರವರ 'ಶ್ರೀರಾಮ ಪರೀಕ್ಷಣಂ'

**ಕುಸುಮ ಬಿ.ಎಂ.***

**DOI: https://doi.org/10.5281/zenodo.19638120**

**ABSTRACT**

ಕನ್ನಡ ಕಾವ್ಯಪರಂಪರೆಯ ಬಹುಮುಖ್ಯ ಗುಣವಾದ 'ಪ್ರಶ್ನಿಸುವ' ಎದೆಗಾರಿಕೆಯನ್ನು ಡಿ.ವಿ.ಜಿ. ಅವರ 'ಶ್ರೀರಾಮ ಪರೀಕ್ಷಣಂ' ಕಾವ್ಯವು ಅತ್ಯಂತ ಪರಿಣಾಮಕಾರಿಯಾಗಿ ದುಡಿಸಿಕೊಂಡಿದೆ. ವಾಲ್ಮೀಕಿ ಹಾಗೂ ಕುವೆಂಪು ಅವರ ಕೃತಿಗಳ ಹಿನ್ನೆಲೆಯಲ್ಲಿ ಇದನ್ನು ಅವಲೋಕಿಸುತ್ತಾ, ರಾಮನ ಧರ್ಮರಕ್ಷಣೆಯ ಭರದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಘಾಸಿಗೊಂಡ ಸ್ತ್ರೀಪಾತ್ರಗಳ ಆಂತರಿಕ ತಲ್ಲಣಗಳನ್ನು ಇಲ್ಲಿ ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ. ಅಹಲ್ಯೆ, ತಾರೆ, ಮಂಡೋದರಿ ಮತ್ತು ಸೀತೆಯರು ರಾಮನ ಆದರ್ಶ, ನ್ಯಾಯನಿರ್ಣಯ ಹಾಗೂ ಮೌಲ್ಯಗಳನ್ನು ಎದುರುಗೊಳ್ಳುವ ಬಗೆ ಅನನ್ಯವಾಗಿದೆ. ಪ್ರಕೃತಿ–ಸಂಸ್ಕೃತಿಯ ನಡುವಣ ಸಂಘರ್ಷ, ದಾಂಪತ್ಯದ ನೈತಿಕತೆ, ಹಾಗೂ ತಪ್ಪು–ಶಿಕ್ಷೆಗಳ ತಾರತಮ್ಯದ ಕುರಿತು ಈ ಮಹಿಳೆಯರು ಎತ್ತುವ ಪ್ರಶ್ನೆಗಳು ರಾಮನ ಉತ್ತರಗಳಿಗಿಂತಲೂ ಹೆಚ್ಚು ಪ್ರಖರವಾಗಿವೆ. ಅಭಿವ್ಯಕ್ತಿ ಸ್ವಾತಂತ್ರ್ಯದ ನೆಲೆಯಲ್ಲಿ ಸತ್ಯವನ್ನು ಶೋಧಿಸಲು, ಮೌಲ್ಯಗಳನ್ನು ಮರುಪರಿಶೀಲಿಸಲು ಮೌನಕ್ಕಿಂತ ದಿಟ್ಟ ಪ್ರಶ್ನೆಗಳೇ ಹೆಚ್ಚು ಸೂಕ್ತ ಮಾರ್ಗ ಎಂಬುದನ್ನು ಈ ವಿಶ್ಲೇಷಣೆ ಸ್ಪಷ್ಟಪಡಿಸುತ್ತದೆ.

**KEYWORDS:** ಶ್ರೀರಾಮ ಪರೀಕ್ಷಣಂ, ಡಿ.ವಿ.ಜಿ., ಮಹಿಳೆಯರ ಪ್ರಶ್ನೆಗಳು, ಅಭಿವ್ಯಕ್ತಿ ಸ್ವಾತಂತ್ರ್ಯ, ರಾಮಸತ್ವದ ಶೋಧ.

* **ಕುಸುಮ ಬಿ.ಎಂ.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.

**ತಿಣುಕಿದನು ಫಣಿರಾಯ**
**ರಾಮಾಯಣದ ಕವಿಗಳ ಭಾರದಲಿ ತಿಂ**
**ಥಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ**
**(ಆದಿ ಪರ್ವ, 1 ಸಂಧಿ, 17 ಪದ್ಯ )**

ಎಂಬ ಕುಮಾರವ್ಯಾಸನ ಪ್ರಸಿದ್ಧ ಮಾತಿನಂತೆ ಈಗಾಗಲೇ ಹಲವಾರು ರಾಮಾಯಣಗಳು ರಚಿತವಾಗಿವೆ. ಈ ಕಥನರೂಪಗಳು ಹಲವು ದೃಷ್ಟಿಕೋನದಿಂದ, ಭಿನ್ನ ನಿಲುವುಗಳೊಂದಿಗೆ ಮೂಡಿಬಂದಿವೆ. ಆ ಸಾಲಿನಲ್ಲಿ ಡಿ.ವಿ.ಜಿ.ರವರ "ಶ್ರೀರಾಮ ಪರೀಕ್ಷಣಂ" ಕಾವ್ಯವು ವಿಶಿಷ್ಟವಾಗಿದೆ.

ಕನ್ನಡ ಕಾವ್ಯದ ಮುಖ್ಯ ನೆಲೆ– ಪ್ರಶ್ನಿಸುವುದು. ಕನ್ನಡ ಕಾವ್ಯದಲ್ಲಿ ಪ್ರಶ್ನಿಸುವ ಕಲೆಗಾರಿಕೆ ಆದಿಕವಿ ಪಂಪನಿಂದ ಮೊದಲಾಯಿತು. ಜಾತಿವ್ಯವಸ್ಥೆಯ ಸಂಕೀರ್ಣ ಸಮಾಜದಲ್ಲಿಯೂ ಜಾತಿ ಯಾವುದು? ಎಂದು ಪ್ರಶ್ನಿಸುವ ಎದೆಗಾರಿಕೆ ಕನ್ನಡ ಕಾವ್ಯಗಳಲ್ಲಿ ಕಂಡುಬರುತ್ತದೆ. ಸಮಾಜವನ್ನು ಪ್ರಶ್ನಿಸುತ್ತಾ ಹೋರಾಟಗಳೇ ನಡೆದಿವೆ. ಅಂತೆಯೇ ಆಧುನಿಕ ಕಾವ್ಯಗಳು ಕೂಡ ಪ್ರಶ್ನಿಸುವ ಸ್ವಾತಂತ್ರ್ಯ ಮತ್ತು ಸಂವೇದನಾಶೀಲ ವಿವೇಕವನ್ನು ಹೊಂದಿವೆ. ಪ್ರಶ್ನಿಸುವುದೆಂದರೆ ಸರಿ–ತಪ್ಪುಗಳ ವಿವೇಚನೆಯೇ ಹೊರತು ಪ್ರತಿಷ್ಠೆಯ ಸಂಕೇತವಲ್ಲ. ಸಮಾಜಗಳು ಅನುಸರಿಸುವ ಮೌಲ್ಯವ್ಯವಸ್ಥೆಗಳು ಜೀವಪರವಾದವೇ ಅಥವಾ ಜೀವವಿರೋಧಿಯಾದುವೇ ಎಂಬುದು ಪ್ರಶ್ನಿಸುವ ನೆಲೆಯಲ್ಲಿ ಅನಾವರಣಗೊಳ್ಳುವ ತರ್ಕವಾಗಿದೆ. ಇಂತಹ ಪ್ರಶ್ನೆಗಳು ಜ್ಞಾನಕ್ಕೆ ದಾರಿಯಾಗುತ್ತವೆ.

ಕುವೆಂಪುರವರ ಶ್ರೀರಾಮಾಯಣದರ್ಶನಂ ಮಹಾಕಾವ್ಯವು ಶ್ರೀರಾಮನನ್ನು ಪ್ರಶ್ನಿಸುತ್ತಾ ಅವನ ಪುರುಷೋತ್ತಮ ವ್ಯಕ್ತಿತ್ವವನ್ನು ಹಲವು ನೆಲೆಯಿಂದ ಪರಿಷ್ಕರಿಸುತ್ತದೆ. ಈ ಕಾವ್ಯಕ್ಕೂ ಮೊದಲೇ ಪ್ರಕಟಗೊಂಡ ಡಿ.ವಿ.ಜಿ.ರವರ ಶ್ರೀರಾಮ ಪರೀಕ್ಷಣಂ ಕಾವ್ಯವು ಕೂಡ ಎತ್ತಿರುವ ಪ್ರಶ್ನೆಗಳು ಪ್ರಸ್ತುತವಾಗಿವೆ. ರಾಮನ ಧರ್ಮರಕ್ಷಣೆಯಲ್ಲಿ ಪರೋಕ್ಷವಾಗಿ/ಪ್ರತ್ಯಕ್ಷವಾಗಿ ಘಾಸಿಗೊಂಡ ಮಹಿಳೆಯರ ಪ್ರಶ್ನೆಗಳಿವು ಎಂಬುದು ಈ ಕಾವ್ಯದ ಬಹುಮುಖ್ಯ ನೆಲೆ. ಲಕ್ಷ್ಮಣ, ಹನುಮಂತ, ಲೋಕದ ಜನರು ಕೂಡ ಶ್ರೀರಾಮನನ್ನು ಪ್ರಶ್ನಿಸುವವರಾದರೂ ಅಹಲ್ಯೆ, ತಾರಾ, ಮಂಡೋದರಿ, ಸೀತೆ ಇವರ ಪ್ರಶ್ನೆಗಳ ಎದುರು ಅವು ಅಷ್ಟೇನೂ ಮುಖ್ಯವೆನಿಸುವುದಿಲ್ಲ. ರಾಮಾಯಣದ ಭಾಗವಾಗಿ ಬರುವ ಮಹಿಳೆಯರು ಕೇಳುವ ಮೂಲಪ್ರಶ್ನೆಯ ಎದುರು ಉಳಿದ ಪ್ರಶ್ನೆಗಳು ಆನುಷಂಗಿಕ ಮತ್ತು ಪೇಲವವಾಗಿ ತೋರಿಬರುತ್ತವೆ.

ಕುವೆಂಪುರವರ ಶ್ರೀರಾಮಾಯಣದರ್ಶನಂ ಕಾವ್ಯದಲ್ಲಿ 'ಅನಲ'ಳ ಮನಸ್ಸಿನಲ್ಲಿ ಮೂಡಿದ ಪ್ರಶ್ನೆಯು ಅತ್ಯಂತ ಮಹತ್ವದ್ದಾಗಿದೆ. ವನವಾಸದ ಸಮಯದಲ್ಲಿ ರಾವಣನ ಸೆರೆಯಲ್ಲಿ ಸೀತೆಯ ಸಂಗಾತಿಯಾಗಿದ್ದ ವಿಭೀಷಣನ ಮಗಳು ಅನಲ ಸೀತೆಯ ಮನಸ್ಸನ್ನು, ಅವಳ ಗುಣವನ್ನು ಬಲ್ಲವಳು. ಸೀತೆಗೆ ಅಗ್ನಿಪರೀಕ್ಷೆ ಏರ್ಪಟ್ಟಾಗ, ರಾಮನೇ ಈ ಪರೀಕ್ಷೆಯನ್ನು ಒಡ್ಡುತ್ತಿರುವುದು ಅನಲಾಳಿಗೆ ಆಶ್ಚರ್ಯ ಮತ್ತು

ನೋವನ್ನು ತಂದಿದೆ. ಸದಾ ರಾಮನ ಧ್ಯಾನದಲ್ಲಿದ್ದ ಸೀತೆಗೆ ಒದಗಿದ ಈ ಸ್ಥಿತಿಯನ್ನು ಕಂಡು ಅವಳು ಮರುಗುತ್ತಾಳೆ. ಅವಳ ಮನಸ್ಸಿನಲ್ಲಿ ಆಗ ಮೂಡುವ ಪ್ರಶ್ನೆಯೆಂದರೆ 'ಎಷ್ಟು ಕಾಲ ಸೀತೆ ರಾಮನಿಂದ ದೂರವಿದ್ದಳೋ ಅಷ್ಟೂ ಕಾಲ ರಾಮನು ಸೀತೆಯಿಂದ ದೂರವಿದ್ದನಲ್ಲವೇ? ಆದರೆ ಪರೀಕ್ಷೆ ಕೇವಲ ಸೀತೆಗೆ ಮಾತ್ರ ಏಕೆ?' ಈ ಸೂಕ್ಷ್ಮ ಪ್ರಶ್ನೆ ಅವಳಲ್ಲಿ ಮೂಡಿ ಮಾತಾಗದೆ, ನಡೆಯುತ್ತಿರುವ ಘಟನೆಯನ್ನು ವೀಕ್ಷಿಸುತ್ತಿರುತ್ತಾಳೆ. ಆ ಸಂದರ್ಭದಲ್ಲಿ ಅವಳ ಪ್ರಶ್ನೆಯನ್ನು ರಾಮ ಕೇಳಿಸಿಕೊಂಡನೇನೋ ಎಂಬಂತೆ ಅವನು ಅಗ್ನಿ ಪ್ರವೇಶ ಮಾಡುತ್ತಾನೆ. ಅಗ್ನಿಯಿಂದ ಹೊರಕ್ಕೆ ಸೀತೆಯೊಡನೆ ಒಟ್ಟಿಗೆ ಬರುತ್ತಾನೆ. ದಾಂಪತ್ಯವನ್ನು ಆದರ್ಶೀಕರಿಸುವ ಈ ರೀತಿಯ ಪರಿಷ್ಕರಣೆಯು ರಾಮನ ವ್ಯಕ್ತಿತ್ವವನ್ನು ಉಜ್ವಲಗೊಳಿಸುವುದರೊಂದಿಗೆ ಹೊಸ ಕಾಲದ ನಿರೀಕ್ಷೆಗಳನ್ನು ಪ್ರತಿಫಲಿಸುತ್ತದೆ. ಈ ಕೃತಿಯಲ್ಲಿ ಪ್ರಶ್ನೆಯು ಮನಸ್ಸಿನಲ್ಲಿ ಮೂಡಿದರೆ ಶ್ರೀರಾಮ ಪರೀಕ್ಷಣಂ ಕಾವ್ಯದಲ್ಲಿ ರಾಮನು ನೇರ ಪ್ರಶ್ನೆಗಳಿಗೆ ಎದುರಾಗಬೇಕಾಗುತ್ತದೆ. ಈ ಆಯ್ದ ಪ್ರಸಂಗಗಳ ನಿರೂಪಣೆಯಲ್ಲಿ ರಾಮನ ಉತ್ತರಗಳಿಗಿಂತ ಅವರು ಎತ್ತಿದ ಪ್ರಶ್ನೆಗಳು ಮುಖ್ಯವಾಗುತ್ತವೆ.

ಆದಿಕವಿ ವಾಲ್ಮೀಕಿ ಋಷಿಯಿಂದ ಮೊದಲುಗೊಂಡ ಮಹಾಕಾವ್ಯ ಪರಂಪರೆಯು ಡಿ.ವಿ.ಜಿ.ರವರಿಗೆ ಮತ್ತೊಂದು ವೇದ, ಪಂಚಮವೇದವಾಗಿ ತೋರುತ್ತದೆ. ರಾಮಾಯಣ ಕಾವ್ಯದಲ್ಲಿ ಋಷಿ ಕವಿಯ ಕೊಡುಗೆ ಎಂದರೆ ಆತ ತೋರಿದ ಮನುಷ್ಯತ್ವದ ಖಚಿತ ಕನಕಕೇತು ಎಂದು ಡಿ.ವಿ.ಜಿ.ರವರು ಮನಗಾಣಿಸುತ್ತಾರೆ. ಅದೆಂದರೆ ದಶರಥ ಸುತನಾದ ಶ್ರೀ ರಾಮನು ಪ್ರಪಂಚದ ವಸತಿ ಅಂದರೆ ನಿಯಮ ಪ್ರಕಾರ ಸಾಗಿದ ವನದುರ್ಗಗಳ ದಾರಿ. ಇಲ್ಲಿ ಕವಿ ಕಂಡುದಾದರೂ ಏನು?

**ಕಂಡಯ್ ದೈವದ ಕುಟಿಲವ ।**
**ಕಂಡಯ್ ಮನುಜಸ್ವಭಾವದುಚ್ಚಾವಚಮಂ ॥**
**ಕಂಡಯ್ ಧರ್ಮಪರೀಕ್ಷೆಯ ।**
**ಕಂಡಯ್ ಪರಿಪೂರ್ಣ ಜೀವನೋಲ್ಲೇಖನಮಂ ॥**

ಈ ಬಗೆಯ ದೈವ ಕುಟಿಲ, ಧರ್ಮಪರೀಕ್ಷೆಯು ಕಣ್ಮುಂದೆಯೇ ಮರಳಿ ನಡೆಯಿತು ಎನ್ನುವ ಹಾಗೆ ನುಡಿದ ಆದಿಕವಿ ವಾಲ್ಮೀಕಿಯನ್ನು ಕ್ಷಮೆಕೋರುತ್ತಲೇ ತಮ್ಮ ಶ್ರೀರಾಮ ಪರೀಕ್ಷಣಂ ಎಂಬ ಕಾವ್ಯರಚನೆಗೆ ಮುಂದಾಗುತ್ತಾರೆ.

**ಕ್ಷಮಿಸೆನ್ನ ಕವಿಪಿತಾಮಹ ।**
**ವಿಮೃಶಿಪನಾನಲ್ತು ನಿನ್ನ ಕೃತಿಚಾತುರಿಯಂ ॥**
**ಅಮೃತಾನ್ನವನುಂಡಣುಗಂ ।**
**ಪ್ರಮುದಿತನಹನಲ್ತೆ ಕರಪುನರ್ಲೇಹನದಿಂ ? ।**

ಶ್ರೀರಾಮ ಪರೀಕ್ಷಣಂ ಕಾವ್ಯದ ಮೊದಲ ಪ್ರಶ್ನೆ ಅಹಲ್ಯೆಯದು. ಅವಳ

ಜೀವನೋದ್ಧಾರ ಮತ್ತು ಶಾಪವಿಮೋಚನೆ ಎರಡೂ ರಾಮನ ಪಾದಸ್ಪರ್ಶದಿಂದ ಘಟಿಸಿದವು. ಗೌತಮ ಋಷಿಯ ಪತ್ನಿಯಾದ ಅಹಲ್ಯೆ ಇಂದ್ರನ ಜಾಲಕ್ಕೆ ಬಲಿಯಾದವಳು ಎಂದು ಕೆಲವು ಕಥಾನಕಗಳು ನಿರೂಪಿಸುತ್ತವೆ. ಮತ್ತೆ ಕೆಲವು ಅಹಲ್ಯೆ ಇಂದ್ರನ ಸುಳಿವು ತಿಳಿದೆ ಸಲಿಗೆ ಬೆಳೆಸಿದಳು ಎಂದು ನಿರೂಪಿಸುತ್ತವೆ. ಈ ಸಂಕಥನದ ಸತ್ಯಾಸತ್ಯತೆಗಳು ಏನೇ ಇದ್ದರೂ ಅವು ದಾಂಪತ್ಯದಲ್ಲಿ ಮನಸ್ಸಿನ ಜೊತೆಗೆ ದೇಹದ ಅಸ್ತಿತ್ವವಿರುವುದನ್ನು ಚರ್ಚಿಸುತ್ತವೆ. ಪ್ರಕೃತಿ– ಸಂಸ್ಕೃತಿಯ ನಡುವಣ ತಾಕಲಾಟದಲ್ಲಿ ಹೆಣ್ಣು– ಗಂಡಿನ ವಿಚಿತ್ರ ನಂಟನ್ನೂ ಕೂಡ ನಿರೂಪಿಸುತ್ತವೆ. ಸಂಸ್ಕೃತಿಯಲ್ಲಿ ಮನುಷ್ಯನು ಹಾಕಿಕೊಂಡಿರುವ ನಿಯಮಗಳು ಪ್ರಕೃತಿ ವಿರೋಧಿಯಾಗಿಯೂ ಪರಿಣಮಿಸಬಹುದಾದ ಚರ್ಚೆಯನ್ನು ಈ ಕೃತಿ ಅಹಲ್ಯೆಯ ಪ್ರಶ್ನೆಯ ಹಿನ್ನೆಲೆಯಲ್ಲಿ ನಡೆಸುತ್ತದೆ.

**ಚಂಚಲದ ರಕ್ತ ನಿಶ್ಚಲವಹುದೆ ಹೋಮವಿಧಿಯಿಂ ?!**<br>**ಮಾಂಸದುಬ್ಬೆಗವನ್ ಆಶ್ರಮಪವನನ್ ಇಳಿಸಲಹುದೇಂ ?।**<br>**ಮಾನುಷ್ಯದಾಹವಂ ತೀರ್ಥಜಲ ತಣಿಸಲಹುದೇಂ ? ।**<br>**ತನುವು ಬಾಳ್ದಿರೆ ಮನಸು ಸತ್ತಪುದದೆಂತು ? ದೊರೆಯೇ ॥**

ಇದು ಅಹಲ್ಯೆಯ ಪ್ರಶ್ನೆಯಾದರೆ ವಾಲಿಯ ಪತ್ನಿ ತಾರೆಯದು ತೀರ ಭಿನ್ನವಾದ ಪ್ರಶ್ನೆ. ಪ್ರಕೃತಿಯಲ್ಲಿ ಪ್ರಕೃತಿಯಾಗಿ ಬಾಳುತ್ತಿರುವ ಅವರ ಮೇಲೆ ಮನುಷ್ಯರ ನಿಯಮಗಳನ್ನು ಹೇರಬಹುದೆ? ಅದು ಸರಿಯೇ? ಎಂದವಳು ರಾಮನನ್ನು ಪ್ರಶ್ನಿಸುತ್ತಾಳೆ.

**ವಾನರನ ವಧಿಪ ನಯ ಬೇರೆಯೆಂದೊರೆದ ನೀಂ ।**<br>**ವಾನರಪ್ರಣಯನಯ ಬೇರೆಯೆಂದರಿಯೆಯೆಂ ? ।**

ಅಲ್ಲದೆ ಒಂದೇ ರೀತಿಯ ತಪ್ಪಿಗೆ ಬೇರೆಬೇರೆ ಶಿಕ್ಷೆ ಏಕೆ? ಎಂದು ರಾಮನನ್ನು ಪ್ರಶ್ನಿಸುವ ಧೈರ್ಯ ಆಕೆಗಿದೆ.

**ಅಂದಿಂದ್ರನಂ ಕ್ಷಮಿಸಿ ದುಷ್ಕೃತವ ನೀಂ ಮರೆತೆ ।**<br>**ಇಂದೇಕೆ ವಾಲಿಗಾ ಕ್ಷಮೆಯ ನೀಡದೆ ಕೊಂದೆ ? ।**<br>**ಅಂದಹಲ್ಯೆಗೆ ಮರುಕದಿಂ ಗತಿಯ ನೀಂ ತೋರ್ದೆ ।**<br>**ಇಂದೇಕೆ ರುಮೆಯೊಳಾ ಮಾನದೃಷ್ಟಿಯ ತೊರೆದೆ ? ।**

‘ನಾರೀಮನೋಧರ್ಮವನು ನೀನದೇನರಿತೆ?’ ಎಂದು ಪ್ರಶ್ನೆಗಳ ಮಳೆಗರೆಯುವ ತಾರೆ ರಾಮನನ್ನು ದೋಷಿ ಸ್ಥಾನದಲ್ಲಿ ನಿಲ್ಲಿಸುತ್ತಾಳೆ.

ಮಂಡೋದರಿ(ರಾವಣನ ಮಡದಿಯ)ಯ ಪ್ರಶ್ನೆ ಬಲು ಮಾರ್ಮಿಕವಾಗಿದೆ. ನ್ಯಾಯದ ಮುಂದೆ ಎಲ್ಲರೂ ಸಮಾನರೆನ್ನುವ ನ್ಯಾಯವಾದಿ ರಾಮನಿಗೆ ಆಕೆ ಕೇಳುವ ಏಕೈಕ ಪ್ರಶ್ನೆಯೆಂದರೆ “ಅನ್ಯನಪರಾಧಿಯಂ ಕ್ಷಮಿಸಿದಾ ನಿನ್ನ ನಯ ನಿನ್ನಯಪರಾಧಿಗೆಂತಿಲ್ಲವಾಯ್ತು?”. ರಾಮಾಯಣದ ಮೊದಲಲ್ಲಿ ಗೌತಮನ

ದೋಷಿಯಾದ ಇಂದ್ರನಿಗೆ ತೋರಿದ ಕ್ಷಮೆಗೆ ರಾವಣ ಅರ್ಹನಾಗದೇ ಹೋದುದರ ಕಡೆಗೆ ಗಮನ ಸೆಳೆಯುವ ಆಕೆಯ ಪ್ರಶ್ನೆ ರಾಮನಲ್ಲಿಯೂ ದೋಷವನ್ನು ಕಾಣುವಂತೆ ಮಾಡುತ್ತದೆ.

ಈ ಮಹಿಳೆಯರ ಪ್ರಶ್ನೆಗಳು ಸೀತೆಯ ಪ್ರಶ್ನೆಗಳಲ್ಲಿ ಮತ್ತಷ್ಟು ಪ್ರಖರವಾಗಿ ಕಾಣಿಸಿಕೊಳ್ಳುತ್ತವೆ. ರಾಮನನ್ನು ಕುರಿತು ಕೇಳುವ 'ನಿನ್ನ ಮನಸ್ಸಿನಲ್ಲಿ ನನ್ನ ಮೇಲಿನ ಸಂದೇಹ ಇನ್ನೂ ಉಳಿದಿರುವುದೇ?' ಎಂಬ ಅವಳ ಪ್ರಶ್ನೆಯು ಅವಳನ್ನು ಕಾಡಿಗೆ ದೂಡಿದ್ದರ ಹಿಂದಿನ ನೈಜ ಕಾರಣವನ್ನು ಬೆರಳು ಮಾಡುತ್ತದೆ. ಜನರ ಸಂದೇಹಕ್ಕಿಂತ ರಾಜನ ಸಂದೇಹದ ಪರಿಣಾಮಕ್ಕೆ ತನ್ನ ಜೀವನ ಸಿಲುಕಿದ್ದರ ಬಗೆಗೆ ಅವಳು ಪ್ರಶ್ನಿಸುತ್ತಾಳೆ. ಸೀತೆಯು ಕೂಡಾ ತನಗೆ ತಪ್ಪಿಹೋದ ಮತ್ತು ಗೌತಮನ ಕುಟುಂಬಕ್ಕೆ ಸಿಕ್ಕ ರಾಮನ ಔದಾರ್ಯವನ್ನು ನೆನಪಿಸುತ್ತಾಳೆ. ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ರಾಮನ ಆಹ್ವಾನವನ್ನು ಅವಳು ನಿರಾಕರಿಸುತ್ತಾಳೆ.

ಅಭಿವ್ಯಕ್ತಿ ಸ್ವಾತಂತ್ರ್ಯದ ನೆಲೆಯಲ್ಲಿ ಪ್ರಶ್ನೆಗಳು ಸಹ ಸೇರುತ್ತವೆ. ಪ್ರತಿಯೊಂದು ಪ್ರಶ್ನೆಗೂ ಉತ್ತರ ಸಿಗುತ್ತದೆಯೋ ಇಲ್ಲವೋ ಆದರೆ ಒಂದು ಸಂಗತಿಯನ್ನು ಕಾಣುವ ಹಲವು ಬಾಗಿಲುಗಳನ್ನು ತೆರೆಯುತ್ತದೆ. ಮೌನ ಯಾವಾಗಲೂ ಸಮ್ಮತಿಯಾಗದೇ ಇರಬಹುದು ಮತ್ತು ಪ್ರಶ್ನೆಗೆ ಕೊಟ್ಟ ಉತ್ತರ ಯಾವಾಗಲೂ ಸರಿಯಾಗಿಲ್ಲದಿರಬಹುದು. ಹಾಗಾಗಿ ಸತ್ಯವನ್ನು ಕಾಣಲು ಪ್ರಶ್ನೆಗಳು ಸಹಕಾರಿ. ಕಾವ್ಯದಲ್ಲಿ ರಾಮ ಎಲ್ಲರ ಪ್ರಶ್ನೆಗಳಿಗೂ ಉತ್ತರವನ್ನು ನೀಡುತ್ತಾನೆ. ಅವನ ಉತ್ತರಗಳು ಸಮಂಜಸವೇ? ಎಂಬ ಪರಿಶೀಲನೆಗೂ ಮಿಗಿಲಾದುದ್ದನ್ನು ಕಾವ್ಯ ತಾನು ಎತ್ತುವ ಪ್ರಶ್ನೆಗಳ ಮೂಲಕ ಸಾಧಿಸಿದೆ. ಮಹಿಳೆಯರ ಈ ಪ್ರಶ್ನೆಗಳ ಜೊತೆಗೆ ಲೋಕದ ಜನರ ಪ್ರಶ್ನೆ, ಲಕ್ಷ್ಮಣನ ಪ್ರಶ್ನೆ, ಹನುಮಂತನ ಪ್ರಶ್ನೆಯೂ ಕಾವ್ಯದಲ್ಲಿ ವರ್ಣಿತವಾಗಿದೆ. ಆದರೆ ಅವುಗಳನ್ನು ಇಲ್ಲಿ ಚರ್ಚಿಸಿಲ್ಲ.

**ಪರಾಮರ್ಶನ ಗ್ರಂಥಗಳು:**


1. ನಾಯಕ ಹಾ.ಮಾ. (ಸಂಪಾದಕರು), (2013), ಡಿ.ವಿ.ಜಿ. ಕೃತಿಶ್ರೇಣಿ – ಸಂಪುಟ 10, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
2. ಕುವೆಂಪು, (1971), ಶ್ರೀರಾಮಾಯಣ ದರ್ಶನಂ, ಮೈಸೂರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
3. https://kumaaravyaasabhaarata.wordpress.com/tag/%E0%B2%AB%E0%B2%A3%E0%B2%B-F%E0%B2%B0%E0%B2%BE%E0%B2%AF/